## ಆಕಿ ಮತ್ತು ಮಡಕಿ

ಹದಗೊಂಡ ಮಣ್ಣಿನ
ಮೈಯಿಂದ ಅರಳಿದ ಮಡಕಿ,
ಬದುಕನ್ನ ಹದಗೊಳಿಸಿ
ಚಿತ್ರವಾಗಿಸಲೆಂದೆ
ಕಾಯುತಿರುವ ಆಕಿ...

ಜತನದಿಂದ ಕಾಯಬೇಕು
ಮಡಿಕೆಯಂತ ಬದುಕನ್ನ
ಇಂಚಿಂಚಿಗೂ,
ಸಾಲಾಗಿ ಸೇರಿಸಿಟ್ಟ
ಕನಸುಗಳಂತೆ!

ಮುರಿಯುವುದೆಂಬ ಭಾವ
ಅಯ್ಯೋ!
ಮುರಿಯುವರೆಂಬ ಭಾವ
ನಾಜೂಕು ಮಡಿಕೆಯ
ತಿರುಗುವಿಕೆಯಲ್ಲೂ
ಅದೆಷ್ಟು ಏರಿಳಿತದ ಗೆರೆಗಳು!

ತಿರುಗಿ ನಿಂತು
ಮಡಿಕೆಯಾಗಿ,
ಒಡಲನ್ನ ತುಂಬಿ
ಆಗಾಗ ಖಾಲಿಯಾಗಿ
ಅವಳ ಕಣ್ಣ ಬೆಳಕಲ್ಲಿ
ಸ್ಥಿತ ಧ್ಯಾನಿಯಾಗಿ!
ಬದುಕೆಂಬ
ಬಯಲಲ್ಲಿ ಮತ್ತೆ ಮಣ್ಣಾಗಿ!

-ಸುವರ್ಣ ಚೆಳ್ಳೂರು



## ಮಡಕೆ ಮತ್ತು ಆಕೆ

ನುಣುಪಾದ ಮಣ್ಣು ಹದವಾಗಿ ಮೈವೆತ್ತು
ಮಡಕೆಗಳಾಗಿವೆ ಇಲ್ಲಿ
ಜೀವಜಲ ತಂಪಾಗಿಸುವ ಕಂಕಣ ಕಟ್ಟಿ
ಬಣ್ಣಗಾರನಿಗೆ ಮೈಯೊಡ್ಡಿ
ಸೊಂಟದಲಿ ಚಿತ್ತಾರ ಬಿಡಿಸಿಕೊಂಡಿವೆ

ಜಖಮಗೊಂಡು ಬುಕುಣಿಯಾದಾವೆಂಬ
ಎದೆಯ ದಿಗಿಲೊಂದಿಡಿದು
ಬೆಳಿಗ್ಗೆಯಿಂದ ಸಂಜೆಯವರೆಗೂ
ನಾಜೂಕಿನಿಂದ ಜತನ ಮಾಡುತ್ತಾಳಾಕೆ

ಒಂದರ ಮೇಲೊಂದು ಒಂದರ ಬಾಜುವೊಂದು
ಜೋಡಿಸಿಟ್ಟು ಚಂದದ ಸಾಲಾಗಿಸಿ
ವ್ಯಾಪಾರ ಕುದುರುವ ಗಳಿಗೆಗೆ ಕಾದು ನಿಂತು
ಬಿಸಿಲ ಬೇಗೆಯಲಿ ಬಸವಳಿಯುತ್ತಾಳೆ

ವ್ಯಾಪಾರದ ಕಾವು ಹೆಚ್ಚಾದಂತೆ ತಂಪಾಗುತ್ತಾಳೆ
ಬಿಕರಿಗೊಂಡಂತೆ ಮಡಕೆಗಳು ಗೆಲುವಾಗುತ್ತಾಳೆ
ನಿರಾಶದಾಯಕ ವ್ಯಾಪಾರಕ್ಕೂ ಜಗ್ಗದೆ ಬಗ್ಗದೆ
ನಿತ್ಯದ ಬೆಳಗಿಗೊಂದು ಸವಾಲೊಡ್ಡಿ ನಿಲ್ಲುತ್ತಾಳೆ

-ರುಕ್ಮಿಣಿ ನಾಗಣ್ಣವರ